**ಆದಿಜಗದ್ಗುರು ಶ್ರೀ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವ – 2018**
**ಸುತ್ತೂರು ಶ್ರೀಕ್ಷೇತ್ರ**

# ಶೈಕ್ಷಣಿಕ ಹಾಗೂ ವಿಜ್ಞಾನ ವಸ್ತುಪ್ರದರ್ಶನ

ಸುತ್ತೂರು ಶ್ರೀಕ್ಷೇತ್ರ : ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವವು ದಿನಾಂಕ : 13-01-2018 ರಿಂದ 18-01-2018ರವರೆಗೆ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನಿಧ್ಯದಲ್ಲಿ ನಡೆಯಲಿದೆ.

ಈ ಜಾತ್ರಾ ಮಹೋತ್ಸವದ ಅಂಗವಾಗಿ ಜೆಎಸ್‌ಎಸ್ ಸಾಮಾನ್ಯ ಶಿಕ್ಷಣ ವಿಭಾಗದಿಂದ ಶೈಕ್ಷಣಿಕ ಹಾಗೂ ವಿಜ್ಞಾನ ವಸ್ತುಪ್ರದರ್ಶನವನ್ನು ಏರ್ಪಡಿಸಲಾಗಿದೆ. ಈ ವಸ್ತುಪ್ರದರ್ಶನದ ಉದ್ಘಾಟನೆಯನ್ನು ದಿನಾಂಕ:13-01-2017ರ ಸಂಜೆ 4 ಘಂಟೆಗೆ ಜಗದ್ಗುರು ಶ್ರೀ ಶಂಕರಚಾರ್ಯವಿದ್ಯಾರಣ್ಯಭಾರತೀ ಸ್ವಾಮಿಗಳು, ಶ್ರೀ ಹಂಪಿ ವಿರೂಪಾಕ್ಷ ಮಹಾಸಂಸ್ಥಾನಮಠ ಹಂಪಿ ಹಾಗೂ ಶ್ರೀ ಗುರುಪರದೇಶಿಕೇಂದ್ರ ಮಹಾಸ್ವಾಮಿಗಳವರು, ಶ್ರೀ ಕೆರಗೋಡಿ ರಂಗಾಪುರ ಸುಕ್ಷೇತ್ರ ತಿಪಟೂರು ಇವರ ಸಮ್ಮುಖದಲ್ಲಿ ಉನ್ನತ ಶಿಕ್ಷಣ ಸಚಿವರಾದ ಶ್ರೀ ಬಸವರಾಜರಾಯರೆಡ್ಡಿಯವರು ನೆರವೇರಿಸಿದರು. ಈ ಸಂದರ್ಭದಲ್ಲಿ ಡಾ. ಎಂ. ಮಹದೇವಪ್ಪ ವಿಶ್ರಾಂತ ಕುಲಪತಿಗಳು, ಶ್ರೀಮತಿ ಭಾರತಿ ಕುಲಸಚಿವರು ಮೈಸೂರು ವಿಶ್ವವಿದ್ಯಾನಿಲಯ, ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಆಡಳತಾಧಿಕಾರಿಗಳಾದ ಸತೀಶ್ ಚಂದ್ರರವರು, ಡಾ. ಹರೀಶ್‌ರವರು, ಡಾ. ಮಹೇಂದ್ರಪ್ಪನವರು, ಹಾಗೂ ಡಾ. ಸಿದ್ದಲಿಂಗಮೂರ್ತಿರವರು ಉಪಸ್ಥಿತರಿದ್ದರು.

ಜೆಎಸ್‌ಎಸ್ ಸಾಮಾನ್ಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಚಿದ್ರೆಶಂಕರಯ್ಯಸ್ವಾಮಿಯವರು, ಉಪನಿರ್ದೇಶಕರಾದ ಶ್ರೀ ಹೆಚ್. ವಿ. ಶೇಷಗಿರಿರಾವ್‌ರವರು, ಅಧಿಕಾರ ವರ್ಗದವರು ಹಾಜರಿದ್ದು ಎಲ್ಲಾ ಮಳಿಗೆಗಳ ಮಾದರಿಗಳನ್ನು ವೀಕ್ಷಣೆಮಾಡಿ ಮೆಚ್ಚುಗೆ ವ್ಯಕ್ತಪಡಿಸಿದರು.

**ಈ ವಸ್ತುಪ್ರದರ್ಶನದಲ್ಲಿ ವಿಷಯವಾರು 14 ವಿಭಾಗಗಳವೆ.**

| ಕ್ರ. ಸಂ. | ಧ್ಯೇಯ | ಒಟ್ಟು ಮಾದರಿಗಳು |
|---|---|---|
| 1 | ಭೌತಶಾಸ್ತ್ರ | 31 |
| 2 | ಗಣಿತ | 25 |
| 3 | ರಸಾಯನ ಶಾಸ್ತ್ರ | 10 |
| 4 | ಜೀವಶಾಸ್ತ್ರ | 12 |
| 5 | ಆರೋಗ್ಯ ಮತ್ತು ನೈರ್ಮಲ್ಯ | 08 |
| 6 | ಗ್ರಾಮೀಣಾಭಿವೃದ್ಧಿ | 07 |
| 7 | ಕೌಶಲ ಭಾರತ ಮತ್ತು ಕೈಗಾರಿಕೆ | 06 |
| 8 | ಸ್ವಚ್ಛಭಾರತ | 09 |
| 9 | ಡಿಜಿಟಲ್ ಇಂಡಿಯಾ | 04 |
| 10 | ಕೃಷಿ | 08 |
| 11 | ಸಾಮಾನ್ಯ ಸಮಾಜ ವಿಜ್ಞಾನ | 15 |
| 12 | ಭಾಷೆಗಳು | 37 |
| 13 | ದೇಸಿಯ ಆಟಗಳು | 12 |
| 14 | ಹಿರಿಯ ಪ್ರಾಥಮಿಕ ಶಾಲೆ, ಸುತ್ತೂರು | 11 |
| | **ಒಟ್ಟು** | **195** |

195 ವಿವಿಧ ಮಾದರಿಗಳನ್ನು ಪ್ರದರ್ಶಿಸಲಾಗಿದೆ. ಸುಮಾರು 60 ಜನ ಶಿಕ್ಷಕರು ಹಾಗೂ 400 ವಿದ್ಯಾರ್ಥಿಗಳು ಭಾಗವಹಿಸಿದ್ದಾರೆ.

ಸಂಜೆಯಿಂದಲೇ ಸಾವಿರಾರು ಜನರು ವಸ್ತುಪ್ರದರ್ಶನವನ್ನು ವೀಕ್ಷಿಸಿದರು.